# ನೋವಿನ ದಾರಿಯ ತುದಿಯಲ್ಲಿ ಸಂತೈಸುವ ಹಾಡು

■ ಗೌರಿ



**ಹರೆಯದ ಮನಸ್ಸುಗಳು ಪ್ರೇಮಸಂಬಂಧವನ್ನು ಅಪ್ರಬುದ್ಧವಾಗಿ ನಿರ್ವಹಿಸುವ ಬಗೆಯನ್ನು ಅದೇ ಅಪ್ರಬುದ್ಧತೆಯ ಜೊತೆಗೇ ಚಿತ್ರಿಸುವ ಈ ಕಿರುಚಿತ್ರದ ಕೊನೆಯಲ್ಲಿ ಹಾಡು, ತೆರೆಯ ಮೇಲಿನ ಪಾತ್ರಗಳೊಟ್ಟಿಗೆ ವೀಕ್ಷಕರಿಗೂ ಸಂತೈಸುವ ಆಪ್ತಹಸ್ತದಂತೆ ಭಾಸವಾಗುತ್ತದೆ.**

ಹರೆಯದಲ್ಲಿ ಪ್ರೇಮದಲ್ಲಿ ಬಿದ್ದವರ ಒದ್ದಾಟಗಳು ಮತ್ತು ಅವರ ನಡುವಿನ ಸಂಬಂಧದ ಬೇರೆ ಬೇರೆ ಆಯಾಮಗಳನ್ನು ಇಟ್ಟುಕೊಂಡು ಕಟ್ಟಿದ ಕಿರುಚಿತ್ರ ‘ನಿರ್ಧಾರ’. ತನ್ನ ಬದುಕಿಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬ ಅರಿವಿಲ್ಲದ ಎಳೆಯ ಮನಸ್ಸುಗಳನ್ನು ಎದುರಿಗಿಟ್ಟು, ಕೊನೆಗೆ ಅದಕ್ಕೆ ಪರಿಹಾರವನ್ನೂ ಸೂಚ್ಯವಾಗಿ ಈ ಕಿರುಚಿತ್ರ ಸೂಚಿಸುತ್ತದೆ.

ಎರಡು ಕಥಾ ದಾರಿಗಳಲ್ಲಿ ತೆರೆದುಕೊಳ್ಳುವ ಈ ಚಿತ್ರ, ಒಂದಕ್ಕೊಂದು ಖೋ ಕೊಟ್ಟುಕೊಳ್ಳುತ್ತ ಸಾಗುತ್ತದೆ. ಹುಡುಗಿ ಮುಂಜಾವಿನಲ್ಲಿ ತನ್ನ ಗೆಳತಿಯೊಂದಿಗೆ ವಾಕಿಂಗ್‌ಗೆಂದು ಉದ್ಯಾನಕ್ಕೆ ಬಂದಿದ್ದಾಳೆ. ಹುಡುಗ ತನ್ನ ಗೆಳೆಯನೊಂದಿಗೆ ಮನೆಯಲ್ಲಿ ಕೂತಿದ್ದಾನೆ. ಅವನಿಗೆ ಅವಳ ಫೇಸ್‌ಬುಕ್ ಪಾಸ್‌ವರ್ಡ್ ತಿಳಿದುಕೊಳ್ಳುವ ಆಸೆ. ಅದರ ಮೂಲಕ ಅವಳನ್ನು ‘ಕಂಟ್ರೋಲ್’ ಮಾಡುವ ಹುನ್ನಾರ. ವಾಟ್ಸ್‌ಆ್ಯಪ್‌ನಲ್ಲೇ ಪಾಸ್‌ವರ್ಡ್ ಕೊಡುವಂತೆ ಕೇಳುತ್ತಾನೆ. ಅವಳು ಕೊಡಲು ಸಿದ್ಧಳಿಲ್ಲ. ಅವಳಿಂದ ಪಾಸ್‌ವರ್ಡ್ ತಿಳಿದುಕೊಳ್ಳದೇ ಬಿಡುವುದಿಲ್ಲ ಎಂಬುದು ಇವನ ಹಟ. ಇಬ್ಬರೂ ಇದನ್ನು ತಮ್ಮ ಸ್ನೇಹಿತರ ಬಳಿ ಹೇಳಿಕೊಳ್ಳುತ್ತ ಹಳೆಯ ದಿನಗಳನ್ನೂ ನೆನಪಿಸಿಕೊಳ್ಳುತ್ತಿದ್ದಾರೆ. ಆ ಫ್ಲ್ಯಾಶ್‌ಬ್ಯಾಕ್‌ಗಳಲ್ಲಿ ಅವರ ಪ್ರೇಮದ ಕತೆಯೂ ತೆರೆದುಕೊಳ್ಳುತ್ತ ಹೋಗುತ್ತದೆ.

ನಗರಕ್ಕೆ ಬಂದ ಹೊಸತರಲ್ಲಿ ಕಾಡುವ ಏಕಾಂತದ ಸಮಯದಲ್ಲಿ ಅವಳಿಗೆ ಜೊತೆಯಾದವನು ಅವನು. ಶ್ರೀಮಂತ ಮನೆತನದ ಅವನು ತನ್ನ ‘ಗಿಫ್ಟ್’ಗಳ ಮೂಲಕವೇ ಮನಸ್ಸು ಕದ್ದವನು. ಇವಳೂ ಅವನ ಗಿಫ್ಟ್‌ಗಳನ್ನೆಲ್ಲ ತನ್ನ ಮೇಲಿನ ಪ್ರೀತಿಯ ಸಂಕೇತ ಎಂದೇ ಮಾರುಹೋದವಳು. ಆದರೆ ದಿನಕಳೆದಂತೆ ಅವಳ ಮೇಲೆ ಅಧಿಕಾರ ಸ್ಥಾಪಿಸಲು ಹೊರಟಿದ್ದಾನೆ. ಇವಳಿಗೆ ಗಿಫ್ಟ್ ಮೇಲಿನ ವ್ಯಾಮೋಹ. ಆದರೆ ಸ್ವಾತಂತ್ರ್ಯ ಕಳೆದುಕೊಳ್ಳಲಾಗದ ಸಂಕಟ.

ಸಾಮಾನ್ಯವಾಗಿ ಎಲ್ಲ ಪ್ರೇಮಸಂಬಂಧಗಳಲ್ಲಿಯೂ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುವ ಈ ಪವರ್ ಗೇಮ್ ಅನ್ನು ವಸ್ತುವಾಗಿಸಿಕೊಂಡಿರುವ ನಿರ್ದೇಶಕರ ಪ್ರಯತ್ನ ಮೆಚ್ಚಬೇಕು. ಆದರೆ ಅದನ್ನು ಕಿರುಚಿತ್ರ ಮಾಧ್ಯಮದಲ್ಲಿ ವ್ಯಕ್ತಪಡಿಸಿದ ರೀತಿ ಮಾತ್ರ ಆ ಮೆಚ್ಚುಗೆಯನ್ನು ಒರೆಸಿಹಾಕುವಂತಿದೆ. ವಿಷಯವನ್ನು ಅರುಹಲು ಮಾತೊಂದೇ ಅಸ್ತ್ರ ಎಂದು ನಂಬಿರುವಂತೆ ತೋರುತ್ತದೆ. ಹಾಗಾಗಿ ಈ ಕಿರುಚಿತ್ರವನ್ನು ಕಣ್ಮುಚ್ಚಿಕೊಂಡು ನೋಡಿದರೂ ನೀವು ಹೆಚ್ಚಿನದೇನನ್ನೂ ಕಳೆದುಕೊಳ್ಳಲಾರಿರಿ. ಹಾಗಂತ ಮಹತ್ತರವಾದದ್ದೇನೂ ಪಡೆದುಕೊಳ್ಳುವುದೂ ಸಾಧ್ಯವಿಲ್ಲ. ಯಾಕೆಂದರೆ ಮಾತುಗಳಲ್ಲಿಯೂ ಅವರು ಕಟ್ಟಿಕೊಡುವುದು ಕ್ಲೀಷೆಯ ಮಾದರಿಗಳನ್ನೇ.

ಬೆಳಿಗ್ಗೆ ವಾಕ್ ಬರುವ ಹುಡುಗಿಯ ಕದಪುಗಳಿಗೆ ಎದ್ದು ಕಾಣುವಂತೆ ಗುಲಾಬಿ ಬಣ್ಣ, ತುಟಿಗಳಲ್ಲಿ ಹೊಳೆವ ಲಿಪ್‌ಸ್ಟಿಕ್‌ಗಳೇ ಆ ಪಾತ್ರವನ್ನೂ, ಅದು ಘಟಿಸುವ ವಾತಾವರಣವನ್ನೂ ಕೃತಕಗೊಳಿಸಿಬಿಡುತ್ತದೆ. ಆ ನಟಿಯರ ಸತ್ವವಿಲ್ಲದ ಅಭಿನಯ, ಏರಿಳಿತಗಳಿಲ್ಲದ ಸಂಭಾಷಣೆಯನ್ನು ಒಪ್ಪಿಸುವ ಬಗೆಯೂ ಈ ಕೃತಕತೆಯ ಪಾರಮ್ಯವನ್ನು ಇನ್ನಷ್ಟು ಹೆಚ್ಚಿಸುತ್ತವೆ. ಮಾತಿನ ನಡುವೆ ನಾಯಿ ಬಂದರೆ ಥಟ್ಟನೇ ದಾರಿಯಲ್ಲಿ ಓಡುತ್ತಿರುವ ನಾಯಿಯನ್ನು ತೋರಿಸುವುದು, ಭಾವ ಬದಲಾಗದ ಮುಖದ ಮೇಲೆ ದಳದಳ ಕಣ್ಣೀರು ಸುರಿಯುವುದು, ಇದ್ದಕ್ಕಿದ್ದ ಹಾಗೆಯೇ ವೈಡ್ ಆ್ಯಂಗಲ್‌ನಿಂದ ಅಸಹಜವಾಗಿ ಝೂಮ್ ಆಗುವ ಕ್ಯಾಮೆರಾ, ನಡುಗುವ ಫ್ರೇಮ್‌ಗಳು... ಎಲ್ಲವೂ ಟಾಮ್ ಆ್ಯಂಡ್ ಜೆರ್ರಿಯ ದೃಶ್ಯಗಳನ್ನು ನೆನಪಿಸುವ ಹಾಗಿವೆ. ಚಿತ್ರದುದ್ದಕ್ಕೂ ಹಿನ್ನೆಲೆಯಲ್ಲಿ ಒಂದಾದ ನಂತರ ಒಂದರಂತೆ ಮೊಳಗುತ್ತಲೇ ಇರುವ ಕೊಳಲು ವಾದನ, ಸಂಗೀತ ಆಲಾಪಗಳಿಗೂ ಮುನ್ನೆಲೆಯ ದೃಶ್ಯಗಳಿಗೂ ಹೊಂದಿಕೆಯಾಗುವುದಿಲ್ಲ. ಧ್ವನಿ ವಿನ್ಯಾಸವೂ ಕೆಟ್ಟದಾಗಿದೆ. ‘ಕಾಲು ಕಚ್ಚುವ ಶೂ’ ಪ್ರತಿಮೆ ಕೂಡ ಇಡೀ ಚಿತ್ರಕ್ಕೆ ಹೆಚ್ಚಿನ ವಿಸ್ತಾರವನ್ನು ಕೊಡಲು ಸೋತು ವ್ಯರ್ಥವಾಗಿ ಕಸದ ಬುಟ್ಟಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತದೆ.

ಹಾಗೆ ನೋಡಿದರೆ ಚಿತ್ರದ ಕೊನೆಗೆ ಬರುವ ಭಾವಗೀತೆ ಈ ಕಿರುಚಿತ್ರದೊಳಗಿನ ಸಹನೀಯ ಅಂಶ. ಎಂಟೂವರೆ ನಿಮಿಷದ ಕಿರುಚಿತ್ರವನ್ನು ನೋಡಿ ಮನಸ್ಸು ಪ್ರಕ್ಷುಬ್ಧಗೊಂಡವರಿಗೆ ಕೊನೆಗೆ ಹಾಡು ಸಂತೈಸುವ ಆಪ್ತ ಹಸ್ತದಂತೆಯೇ ಭಾಸವಾಗುತ್ತದೆ.



**ಹೆಸರು:** ನಿರ್ಧಾರ
**ನಿರ್ದೇಶನ:** ಉದಯ ಜಾದೂಗಾರ
**ಕಥೆ:** ಗಾಯತ್ರಿ ಯತಿರಾಜ್
**ಛಾಯಾಗ್ರಹಣ:** ಮುರಳೀಧರ ರಾವ್ ಮತ್ತು ನವ್ಯಾ
**ಸಂಗೀತ, ಧ್ವನಿ:** ಸಿಂಧು ಹೆಗಡೆ, ಅಶ್ವಿನ್ ಪಂಡಿತ್
**ತಾರಾಗಣ:** ನವ್ಯಾ, ರೂಪಾ ಗೌಡ, ರೋಷನ್ ಸಾಗರ್, ಅನಂತ್ ಪದ್ಮನಾಭ, ರಾಮನಾಥ್ ಎಸ್.ವಿ.

ಈ ಕಿರುಚಿತ್ರ ವೀಕ್ಷಣೆಗೆ bit.ly/2Oq0sIR ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.